# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2265
2. ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ,
3. ಉತ್ತರಿಸಬೇಕಾದ ದಿನಾಂಕ : 26.03.2026.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರವು ಕೆರೆಗಳ ಸಂರಕ್ಷಣೆಗೆ ಹಿಂದಿನಂತೆ ಇರುವ ಬಫರ್ ವಲಯ ನಿಯಮಗಳ ಬದಲಾವಣೆ ಮಾಡಲು ಕಾರಣವೇನು; ಯಾವ ವೈಜ್ಞಾನಿಕ ಅಧ್ಯಯನ ಅಥವಾ ಸಮಿತಿಯ ಶಿಫಾರಸ್ಸು ಆಧಾರವಾಗಿದೆ; | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ-2014 ಹಾಗೂ ತದನಂತರದ ತಿದ್ದುಪಡಿ 2018 ರಲ್ಲಿನ ಉಪ ಪ್ರಕರಣ (6) ರಲ್ಲಿ ರಸ್ತೆಗಳನ್ನು / ಸೇತುವೆಗಳನ್ನು ಮತ್ತು ಅದೇ ರೀತಿಯ ಇತರೆ ರಚನೆಗಳನ್ನು ಕೆರೆಯ ಅಂಗಳದಲ್ಲಿ ನಿರ್ಮಿಸಲು ಅನುವು ಮಾಡಲಾಗಿದ್ದು, ಉಪ ಪ್ರಕರಣ (3) ರಲ್ಲಿ ಇದಕ್ಕೆ ನಿರ್ಬಂಧ ವಿಧಿಸಿರುವುದರಿಂದ ಒಂದಕ್ಕೊಂದು ವ್ಯತಿರಿಕ್ತವಾಗಿರುತ್ತದೆ.<br><br>ಮುಂದುವರೆದು, ಎನ್.ಜಿ.ಟಿ. ಪ್ರಕರಣ ಸಂಖ್ಯೆ : OA - 195 / 2021 ದಿನಾಂಕ : 04/05/2022 ಹಾಗೂ OA - 104 / 2022 ದಿನಾಂಕ : 17/02/2023 ರ ಆದೇಶದನ್ವಯ ಕೆರೆಯಲ್ಲಿ/ ಕೆರೆಯ ಬಫರ್ ಜೋನ್‌ನಲ್ಲಿ ನಿರ್ಮಾಣಕ್ಕೆ ಅವಕಾಶವಿರುವುದಿಲ್ಲ. ಇದರಿಂದ ಸರ್ಕಾರದಿಂದ ಅನುಷ್ಠಾನಗೊಳಿಸುವ ಸಾರ್ವಜನಿಕ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಕಾಮಗಾರಿಗಳ ಅನುಷ್ಠಾನ ಪ್ರಕ್ರಿಯೆಯಲ್ಲಿ ಹಿನ್ನೆಡೆಯಾಗಿರುತ್ತದೆ.<br><br>ಮುಂದುವರೆದು, ರಾಜ್ಯದ ಸಾಕಷ್ಟು ಕೆರೆಗಳಿಗೆ ಕೆರೆಗಳ ವಿಸ್ತೀರ್ಣಕ್ಕಿಂತ ಬಫರ್ ಜೋನ್ ವೀಸ್ತೀರ್ಣವು ಹೆಚ್ಚಾಗಿರುತ್ತದೆ.<br>ಈ ಹಿನ್ನಲೆಯಲ್ಲಿ, ದಿನಾಂಕ: 22.04.2025 ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಪ್ರಾಧಿಕಾರದ 12ನೇ ಆಡಳಿತ ಮಂಡಳಿಯ ಸಭೆಯಲ್ಲಿ, ಸಾರ್ವಜನಿಕ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಕಾಮಗಾರಿಗಳ ಪ್ರಗತಿಯನ್ನು ನಿಗದಿತ ಸಮಯಮದಲ್ಲಿ ಪೂರ್ಣಗೊಳಿಸಲು ಅನುವಾಗುವಂತೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ಕುರಿತು ಚರ್ಚಿಸಲಾಗಿರುತ್ತದೆ.<br><br>ಸದರಿ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ತಾಂತ್ರಿಕ ಮತ್ತು ಕಾನೂನು ಅಭಿಪ್ರಾಯ ಪಡೆದು ಕ್ರಮವಹಿಸಲು ಸೂಚಿಸಲಾಗಿರುತ್ತದೆ.<br>ಅದರಂತೆ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ತಾಂತ್ರಿಕ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ : ಸನೀಇ 322 ಎಂಐಎಸ್‌ಯು 2025 ಬೆಂಗಳೂರು ದಿನಾಂಕ:19.05.2025 ರಂದು ರಚಿಸಲಾಗಿರುತ್ತದೆ .<br><br>ಸದರಿ ಸಮಿತಿಯು ಈ ಕುರಿತು ದಿನಾಂಕ : 10.07.2025 ರಂದು ಸಭೆ ನಡೆಸಿ, ಬೇರೆ ಬೇರೆ ರಾಜ್ಯಗಳಲ್ಲಿ ಜಲ ಮೂಲಗಳಿಗೆ ನಿಗದಿಪಡಿಸಿರುವ ಬಫರ್ ಜೋನ್ ಕುರಿತು ಚರ್ಚಿಸಿ, ರಾಜ್ಯದ |

| | | |
|---|---|---|
| | | ಕೆರೆಗಳಿಗೆ ಏಕ ರೂಪದ ಬಫರ್ ಜೋನ್ ಬದಲಾಗಿ ಕೆರೆಗಳ ವಿಸ್ತೀರ್ಣಕ್ಕೆನುಗುಣವಾಗಿ ಬಫರ್ ಜೋನ್ ನಿಗದಿಪಡಿಸಲು ಹಾಗೂ ಕೆರೆಗಳ ಬಫರ್ ಜೋನ್ ನಲ್ಲಿ ಸಾರ್ವಜನಿಕ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕಾನೂನು ಅಭಿಪ್ರಾಯದಂತೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮಕ್ಕೆ ತಿದ್ದುಪಡಿ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. |
| ಆ | ಹೊಸ ನಿಯಮದ ಪ್ರಕಾರ 30 ಮೀ ವರೆಗೆ ಬಫರ್ ವಲಯವನ್ನು ಇಳಿಕೆ ಮಾಡುವುದರಿಂದ ಕೆರೆಗಳ ಜಲಸಂಗ್ರಹ ಸಾಮರ್ಥ್ಯ, ನೆರೆ-ಪರಿಸ್ಥಿತಿ ಹಾಗೂ ಭೂಗರ್ಭ ಜಲಮಟ್ಟದ ಮೇಲೆ ಆಗುವ ಪರಿಣಾಮಗಳ ಕುರಿತು ಪರಿಸರ ಇಲಾಖೆಯ ಮೌಲ್ಯಮಾಪನ ವರದಿ ಸರ್ಕಾರದ ಬಳಿ ಇದೆಯೇ; (ಇದ್ದಲ್ಲಿ ಅದರ ಪ್ರತಿಯನ್ನು ಒದಗಿಸುವುದು) | ಕೆರೆ ಬಫರ್ ವಲಯವನ್ನು ಇಳಿಕೆ ಮಾಡುವುದರಿಂದ ಜಲ ಸಂಗ್ರಹ ಸಾಮರ್ಥ್ಯ, ನೆರೆ ಪರಿಸ್ಥಿತಿ ಹಾಗೂ ಭೂಗರ್ಭ ಜಲ ಮಟ್ಟದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂಬ ಬಗ್ಗೆ ಸದರಿ ಇಲಾಖೆಗಳ ಅಧಿಕಾರಿಗಳೊಂದಿಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ತಾಂತ್ರಿಕ ಸಮಿತಿಯ ಸಭೆಯಲ್ಲಿ ಚರ್ಚಿಸಿ ಈ ರೀತಿಯ ಯಾವುದೇ ಪರಿಣಾಮಗಳು ಸಂಭವಿಸುವ ಸಾಧ್ಯತೆ ಇರುವುದಿಲ್ಲ ಎಂದು ಅಭಿಪ್ರಾಯಿಸಲಾಗಿರುತ್ತದೆ. |
| ಇ | ಕೆರೆ ಬಫರ್ ವಲಯದಲ್ಲಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವುದರಿಂದ ಭವಿಷ್ಯದಲ್ಲಿ ನಗರ ಪ್ರದೇಶಗಳಲ್ಲಿ ನೆರೆ ಮತ್ತು ಪರಿಸರ ಹಾನಿ ಅಪಾಯವನ್ನು ತಪ್ಪಿಸಲು ಸರ್ಕಾರ ಯಾವ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಂಡಿದೆ? | ಈ ಕುರಿತು ಬಫರ್ ವಲಯದಲ್ಲಿ ಯಾವುದೇ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಲು ಅವಕಾಶವಿರುವುದಿಲ್ಲವಾದ್ದರಿಂದ ಯಾವುದೇ ರೀತಿಯ ನೆರೆ ಮತ್ತು ಪರಿಸರ ಹಾನಿ ಸಂಭವಿಸುವುದಿಲ್ಲ. |

ಕಡತ ಸಂಖ್ಯೆ: MID/51/LCQ/2026

(ಎನ್.ಎಸ್. ಬೋಸರಾಜು)
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು.